**KACM510002742026**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ನರಸಿಂಹರಾಜಪುರ**

ಸಿ. ಸಿ. ನಂಃ168/2026

ಫಿರ್ಯಾದುದಾರರುಃ ಸರ್ಕಾರದ ಪರವಾನಗಿ ಎನ್. ಆರ್. ಪುರ ಪೊಲೀಸರು

ವಿರುದ್ಧ

ಆರೋಪಿ ಃ 1. ಶ್ರೀಮತಿ ಮಂಜುಳಾ, ಬಿನ್ ಪರಶುರಾಮ್,
36 ವರ್ಷ, ವಾಸ ಃ ಜೈಲ್ ರಸ್ತೆ,,
ಲಿಂಗಾಪುರ ಗ್ರಾಮ, ಎನ್ ಆರ್ ಪುರ ತಾಲೂಕು.

## ಆರೋಪಣೆ

ದಿನಾಂಕಃ 13.02.2026 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನ.ರಾ.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ನ.ರಾ.ಪುರ ನಗರದ ಅಗ್ರಹಾರದ ಬಳಿ ಶ್ರೀ ರಾಘವೇಂದ್ರ ಪ್ರಾವಿಜನ್ ಸ್ಟೋರ್ಸ್ ಮುಂಭಾಗ ನ.ರಾ.ಪುರ – ಕೊಪ್ಪ ಮುಖ್ಯ ಸಿಮೆಂಟ್ ರಸ್ತೆಯಲ್ಲಿ ಆರೋಪಿಯಾದ ನೀವು ಆರೋಪಿ 2 ಮಂಜುಳರವರ ಬಾಬ್ತು ಕೆ.ಎಲ್.57 – ಎನ್.7905 ರಿಜಿಸ್ಟ್ರೇಷನ್ ನಂಬರಿನ ಯಮಹಾ ಕಂಪನಿಯ Facino ಸ್ಕೂಟಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ ನಾಯಿ ಅಡ್ಡಬಂದಿದ್ದರಿಂದ ತಕ್ಷಣ ಬ್ರೇಕ್ ಹಾಕಿದ್ದು, ಸ್ಕೂಟಿ ನಿಯಂತ್ರಣ ತಪ್ಪಿ ಬಿದ್ದು ಅಪಘಾತವಾಗಿದ್ದು, ಆ ಮೂಲಕ ನೀವು ಕಲಂ 281 ಭಾರತೀಯ ನ್ಯಾಯ ಸಂಹಿತೆ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

**KACM510002742026** **CC 168/2026**

ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ನೀವು ಬೈಕ್ ಅನ್ನು ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ಹೊಂದದೆ ಸದರಿ ಬೈಕ್ ಅನ್ನು ಚಾಲನೆ ಮಾಡಿಕೊಂಡು ಹೋಗಿದ್ದು, ಆ ಮೂಲಕ ಕಲಂ 180 ಮೋಟಾರ್ ವಾಹನ ಕಾಯ್ದೆ ಯಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ನೀವು ಬೈಕ್ ಅನ್ನು ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ಹೊಂದದೆ ಸದರಿ ಬೈಕ್ ನಲ್ಲಿ ಬೇರೆಯವರನ್ನು ಕೂರಿಸಿಕೊಂಡು ಬೈಕ್ ಅನ್ನು ತೆಗೆದುಕೊಂಡು ಹೋಗಿ ಆ ಮೂಲಕ ಕಲಂ 181 ಮೋಟಾರ್ ವಾಹನ ಕಾಯ್ದೆ ಯಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಪ್ರಃ1ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉಃ ತಿಳಿಯಿತು.

ಪ್ರಃ2. ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉಃ ತಪ್ಪು ಒಪ್ಪಿಕೊಳ್ಳುತ್ತೇನೆ.

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 22 ನೇ ದಿವಸ ಜುಲೈ ಮಾಹೆ 2026.

22/7/26

(ರಘುನಾಥ ಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ
ನ.ರಾ.ಪುರ.

ಆರೋಪಿಯ ಸಹಿಃ